ಅಧ್ಯಕ್ಷರು: ಎಲ್ಲವೂ ಒಂದೇ ಅರ್ಧ ಗಂಟೆ ಎಂದರೆ, ಅರ್ಧ ಗಂಟೆಯಲ್ಲಿ ಚರ್ಚೆ ಮುಗಿಯುವುದಿಲ್ಲ. ಸುಮ್ಮನೆ ಏಕೆ?

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಇದಾದ ಮೇಲೆ ಕಾವೇರಿ ಕುರಿತಾದ ಚರ್ಚೆಯನ್ನು ತೆಗೆದುಕೊಳ್ಳುತ್ತೇನೆ ಎಂದಿರಿ, ಎಲ್ಲಿ? ನೀರಾವರಿ ಮಂತ್ರಿಗಳು ಕಾವೇರಿ ಕುರಿತು statement ಮಾಡುತ್ತೇವೆ ಎಂದಿದ್ದರಲ್ಲ? ದಯಮಾಡಿ ಹೇಳಿ ಈಗ. ಇದು ಕಾವೇರಿ ಭಾಗದ ರೈತರ ಅಳಿವು-ಉಳಿವಿನ ಪ್ರಶ್ನೆ ಇದು. ಇಲ್ಲದಿದ್ದರೆ ನಾವು ಧರಣಿ ಕೂರುತ್ತೇವೆ.

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದರು.)

(ಗೊಂದಲ)

ಅಧ್ಯಕ್ಷರು: ಕರೆಸುತ್ತೇನೆ. ಬರುತ್ತೇನೆಂದು ಹೇಳಿದ್ದಾರೆ. ಹೇಳಿ ಕಳುಹಿಸಿದ್ದೇನೆ. ನಿಮಗೆ ಇಷ್ಟೂ ತಾಳ್ಮೆ ಇಲ್ಲದಿದ್ದರೆ ಹೇಗೆ? ಕಾವೇರಿ ಎಂದರೆ ಏನು ನಿಮಗೆ ಮಾತ್ರ ಸೀಮಿತವೆ? ಎಲ್ಲರಿಗೂ ಇದು ಗಂಭೀರ ಸಮಸ್ಯೆ.

(ಗೊಂದಲ)

ಅಧ್ಯಕ್ಷರು:- ಈ ಬಗ್ಗೆ ಇಡೀ ಸದನದ concern ಇದೆ. ಮಾನ್ಯ ಸಚಿವರಿಗೆ ಹೇಳಿ ಕಳುಹಿಸಿದ್ದೇನೆ. ನೀವು ಎಲ್ಲದಕ್ಕೂ ಧರಣಿ ಮಾಡುತ್ತೇವೆಂದರೆ ಏನು ಮಾಡುವುದಕ್ಕಾಗುತ್ತದೆ? ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಆರ್.ಅಶೋಕ್:- ಮಾನ್ಯ ಸಚಿವರು ಬರುವವರೆಗೆ ಮಾನ್ಯ ಮಹಾದೇವ ಪ್ರಸಾದ್‌ರವರ ಪ್ರಸ್ತಾವನೆಯೊಂದಕ್ಕೆ ಉತ್ತರಿಸುತ್ತೇನೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಸಚಿವರಿಗೆ ಹೇಳಿ ಕಳುಹಿಸಿದ್ದೇನೆ.

(ಗೊಂದಲ)

ಅಧ್ಯಕ್ಷರು:- ನಮ್ಮನ್ನು ಕಾವೇರಿ ನೀರು ಕುಡಿಯುವುದಕ್ಕೂ ನೀವು ಬಿಡುವುದಿಲ್ಲ. ನಾನು ಮಾನ್ಯ ಸಚಿವರಿಗೆ ಸದನಕ್ಕೆ ಬರುವಂತೆ ಹೇಳಿ ಕಳುಹಿಸಿದ್ದೇನೆ. ದಯವಿಟ್ಟು ತಾವು ಮಾನ್ಯ ಸಚಿವರು ಸದನಕ್ಕೆ ಆಗಮಿಸುವವರೆಗೆ ಸಹಕರಿಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಕಾವೇರಿ ವಿಷಯ ಬಹಳ ಮುಖ್ಯವಾದುದು. ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ಮೊನ್ನೆ ಮಾಡಿದ್ದಂತಹ ಆದೇಶಕ್ಕಿಂತಲೂ ಹೆಚ್ಚು ಮಾಡಿ ಬಿಟ್ಟಿದ್ದಾರೆ. 2 ಟಿಎಂಸಿ ನೀರನ್ನು

ಕೊಡಬೇಕೆಂದು ಮೊನ್ನೆ ಮಾಡಿದ್ದರು. ಇವತ್ತು 2.44 ಟಿಎಂಸಿ ಎಂದು ಮಾಡಿಬಿಟ್ಟಿದಾರೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಚಿವರು ಬರುತ್ತಾರೆ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸದನದ ಬಾವಿಯಲ್ಲಿ ನಿಂತು ಏಕೆ ಮಾತನಾಡುತ್ತೀರಿ? ಅಲ್ಲಿ ಮಾತನಾಡಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಸಚಿವರು ಅದರ ಬಗ್ಗೆ ಹೇಳಿಕೆಯೊಂದನ್ನು ಕೊಡಬೇಕು. ದಯವಿಟ್ಟು ಮಾನ್ಯ ಸಚಿವರನ್ನು ಕೂಡಲೇ ಕರೆಸಿ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್:– ಮಾನ್ಯ ಸಚಿವರು ಬರುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ರೇವಣ್ಣನವರೆ, ಮಾನ್ಯ ಸಚಿವರು ಬರುತ್ತಿದ್ದಾರಂತೆ. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ. ಈ ರೀತಿ ಧರಣಿ ಮಾಡುವುದರಿಂದ ಸುಮ್ಮನೇ ಟೈಮ್ ವೇಸ್ಟ್ ಅಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಅಧಿಕಾರಿಗಳಿಂದ ಬ್ರೀಫ್ ಮಾಡಿಕೊಂಡು ಬರುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಶೋಕ್‌ರವರು ಮತ್ತು ಮಾನ್ಯ ರೇವಣ್ಣನವರ ನಡುವೆ ಸ್ನೇಹ ಚೆನ್ನಾಗಿ ಬೆಳೆದುಕೊಂಡು ಈ ರೀತಿ ಆಗಿ ಹೋಗಿದೆ.

(ಗೊಂದಲ)

ಶ್ರೀ ಆರ್.ಅಶೋಕ್:– ನನಗೂ ಮತ್ತು ಮಾನ್ಯ ರೇವಣ್ಣನವರಿಗೂ first of all ಆಗುವುದೇ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ರೇವಣ್ಣನವರ ಮನೆ ಇರುವ ಕಡೆಯೇ ಮಾನ್ಯ ಅಶೋಕ್‌ರವರ ಕ್ಷೇತ್ರವಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಶೋಕ್‌ರವರ ಜೊತೆಗೆ ಇವರ ನೆಂಟಸ್ತನ ನಡೆಯುತ್ತಿದೆ. ಆದರೆ ಇಲ್ಲಿ ನಮ್ಮಿಬ್ಬರಿಗೂ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮೊನ್ನೆ ತಾನೇ ಮಾನ್ಯ ರೇವಣ್ಣನವರು ಮಾನ್ಯ ಅಶೋಕ್‌ರವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ನಾನ್–ವೆಜ್ ತಿಂದು ಊಟ ಹಾಕಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿ.

(ಗೊಂದಲ)

ಶ್ರೀ ಆರ್.ಅಶೋಕ್:– ನಾನು ನಾನ್–ವೆಜ್ ತಿನ್ನುವುದಿಲ್ಲ ಸಾರ್. ನಾನು ನಾನ್–ವೆಜ್ ತಿನ್ನುವುದನ್ನು ಬಿಟ್ಟುಬಿಟ್ಟಿದ್ದೇನೆ. ನಾನು ಈಗ ವೆಜಿಟೇರಿಯನ್ ಆಗಿದ್ದೇನೆ.

(ಗೊಂದಲ)

ಅಧ್ಯಕ್ಷರು:– ಸದನದ ಬಾವಿಯಿಂದ ಏಕೆ ಮಾತನಾಡುತ್ತೀರಿ?

(ಗೊಂದಲ)

ಅಧ್ಯಕ್ಷರು:– ಮಾನ್ಯ ಮಂತ್ರಿಗಳು ಬರುತ್ತಾರೆ. ದಯವಿಟ್ಟು ಅಲ್ಲಿಯವರೆಗೆ ಸಹಕರಿಸಿ.

(ಗೊಂದಲ)

ಶ್ರೀ ಆರ್.ಅಶೋಕ್:– ಮಾನ್ಯ ಸಚಿವರು ಬರುತ್ತಾರೆ. ದಯವಿಟ್ಟು ಅಲ್ಲಿಯವರೆಗೂ ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು:– ದೆಹಲಿಯಿಂದ ಫ್ಯಾಕ್ಸ್ ಮೂಲಕ ಮಾನ್ಯ ಸಚಿವರಿಗೆ ಮಾಹಿತಿ ಬರಬೇಕಲ್ಲವೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– ದಯವಿಟ್ಟು ಮಾನ್ಯ ಸಚಿವರನ್ನು ಕೂಡಲೇ ಕರೆಸಿ. ಇಲ್ಲದಿದ್ದರೆ ಸದನವನ್ನು adjourn ಮಾಡಿ. ಸದನದ ಕಲಾಪ

ನಡೆಯದೇ ಸುಮ್ಮನೆ ಈ ತರಹ ನಿಂತುಕೊಂಡಿದ್ದರೆ ಏನೂ ಪ್ರಯೋಜನವಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಈಗ ಸದನವನ್ನು ಹತ್ತು ನಿಮಿಷಗಳ ಅವಧಿಗೆ ಮುಂದೂಡಲಾಗಿದೆ.

[ಸದನವನ್ನು ಮಧ್ಯಾಹ್ನ 12.15 ಗಂಟೆಗೆ ಹತ್ತು ನಿಮಿಷಗಳ ಅವಧಿಗೆ ಮುಂದೂಡಲಾಯಿತು]

(ಸದನವು ಮಧ್ಯಾಹ್ನ 12 ಗಂಟೆ 47 ನಿಮಿಷಕ್ಕೆ ಮತ್ತೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೆ.ಜಿ.ಬೋಪಯ್ಯನವರು ಉಪಸ್ಥಿತರಿದ್ದರು)

(ಸದನದ ಬಾವಿಯಲ್ಲಿ ಜೆ.ಡಿ.(ಎಸ್)ಪಕ್ಷದ ಶಾಸಕರು ಧರಣಿನಿರತರಾಗಿದ್ದರು)

2. ವಿಷಯ:– ಕಾವೇರಿ ನೀರಿನ ವಿಚಾರದ ಬಗ್ಗೆ

ಅಧ್ಯಕ್ಷರು:– ಈಗ ಮಾನ್ಯ ಮುಖ್ಯಮಂತ್ರಿಗಳು statement ಮಾಡುತ್ತಾರೆ. ಅಲ್ಲಿಯವರೆಗೆ ಸದನದ ಬಾವಿಯಲ್ಲಿರುವ ಮಾನ್ಯ ಸದಸ್ಯರುಗಳು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು.

(ಸದನದ ಬಾವಿಯಲ್ಲಿದ್ದ ಜೆ.ಡಿ.(ಎಸ್)ಪಕ್ಷದ ಶಾಸಕರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು ಮತ್ತು ಜನತಾ ದಳದ ಸಭಾ ನಾಯಕರಾದ ಮಾನ್ಯ ರೇವಣ್ಣನವರು. ಹೇಳಿಕೆ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಚಿವರೆ, ನಾನು ಕಾವೇರಿ ನೀರಿನ ವಿಚಾರದಲ್ಲಿ ಕೆಲವು ಮಾತುಗಳನ್ನಾಡಬೇಕಿದೆ. ನಾನು ಮಾತನಾಡಿದ ನಂತರ ತಾವು ತಮ್ಮ ಹೇಳಿಕೆಯನ್ನು ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ:– ಆಯಿತು.